

ಡಾ.ವಿನೋದ ಛೆಬ್ಬಿ

ಪರಸಂಬಂಧವು ನಿಂತರೆ ಅದರಿಂದಾದ ಗಾಯ ಮಾಯ್ದು, ಸಂಬಂಧ ಮುಂಚಿನಂತೆ ಆಗುತ್ತದೆಯೆ?

# 146: ಪರಸಂಬಂಧ- 9

ಒಂದು ಸಂಬಂಧದ ಆರಂಭದಲ್ಲೇ ಹೆಣ್ಣುಗಂಡುಗಳು ತಮ್ಮ ಆಸೆ-ಅಪೇಕ್ಷೆಗಳನ್ನು ಬಿಚ್ಚುಮನಸ್ಸಿನಿಂದ ಹಂಚಿಕೊಳ್ಳುವ ಹಾಗೂ ಸಂಗಾತಿಯನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯು ಅನ್ಯೋನ್ಯತೆ ಹುಟ್ಟುಹಾಕುವುದರಿಂದ ಮುಂದೆ ಪರಸಂಬಂಧವು ತಲೆಹಾಕುವ ಸಂಭವ ಕಡಿಮೆಯಾಗುತ್ತದೆ ಎಂದು ಅರ್ಥಮಾಡಿಕೊಂಡೆವು. ಈ ಹಂಚಿಕೊಳ್ಳುವ-ಒಪ್ಪಿಕೊಳ್ಳುವ ಪೂರ್ವತಯಾರಿ ನಡೆಸದೆ ಮದುವೆಯಾದಾಗ ಸುಪ್ತ ಬಯಕೆಗಳು ಒಂದಿಲ್ಲೊಂದು ರೀತಿಯಿಂದ ಹೊರಗೆ ಇಣುಕುತ್ತ, ದಾಂಪತ್ಯವು ಪರಸಂಬಂಧಕ್ಕೆ ತುತ್ತಾಗುವ ಸಂಭವವಿದೆ ಎಂದೂ ತಿಳಿದುಕೊಂಡೆವು.

ದಾಂಪತ್ಯವೊಂದರಲ್ಲಿ ಪರಸಂಬಂಧವು ಕಾಲಿಟ್ಟಿದೆ ಎಂದಿಟ್ಟುಕೊಳ್ಳಿ. ಪರಿಣಾಮ ಏನೇನು ಆಗಬಹುದು? ಅನುಕೂಲಕ್ಕಾಗಿ, ಪರಸಂಬಂಧದಲ್ಲಿ ತೊಡಗಿರುವ ಸಂಗಾತಿಯನ್ನು 'ಎಡವಿದ ಸಂಗಾತಿ' ಎಂದೂ, ಪರಸಂಗದ ಪರಿಣಾಮಗಳನ್ನು ಅನುಭವಿಸುವವರನ್ನು 'ನೊಂದ ಸಂಗಾತಿ' ಎಂದೂ, ಪರಸಂಬಂಧ ಹೊಂದಿದ ಹೊರಗಿನವರನ್ನು 'ಮೂರನೆಯವರು' ಎಂದೂ ಹೆಸರಿಸೋಣ.

ಪರಸಂಬಂಧವು ನೊಂದ ಸಂಗಾತಿಯ ಹಾಗೂ ದಾಂಪತ್ಯದ ಮೇಲೆ ಬೀರಬಹುದಾದ ಪರಿಣಾಮವು ಊಹಾತೀತ. ತನ್ನವರು ಎಂದು ಭದ್ರವಾಗಿ ನಂಬಿದ ವ್ಯಕ್ತಿ ಮೂರನೆಯವರ ಪ್ರಭಾವಕ್ಕೆ ಒಳಗಾಗುವ ವಾಸನೆ ಹೊಡೆಯುವಾಗ ಮೊದಮೊದಲು ಏನನ್ನೂ ನಂಬಲಾಗುವುದಿಲ್ಲ. ಇದು ಸುಳ್ಳಾಗಲಿ ಎಂದು ಮನಸ್ಸು ಬಯಸುತ್ತದೆ. ಆದರೆ ವಾಸ್ತವ ಹರಳುಗಟ್ಟುವಾಗ ಆಘಾತವಾಗುತ್ತದೆ. ಕಳೆದುಹೋಗುತ್ತಿರುವ ಸಂಗಾತಿಯನ್ನು ಉಳಿಸಿಕೊಳ್ಳಲು ಹೋರಾಟ ಶುರುವಾಗುತ್ತದೆ. ಕೋಪಾವೇಶದ ವಾಗ್ವಾದ, ಹಣಾಹಣಿ ಜಗಳದಿಂದ ಶುರುವಾಗಿ ಸಾವಿನ ಯತ್ನದ ತನಕವೂ ಹೋರಾಟ ಮುಂದುವರಿಯುತ್ತದೆ. ಯತ್ನವೆಲ್ಲ ವಿಫಲ ಎನ್ನಿಸಿದಾಗ ಏನಾಗುತ್ತದೆ? ಮೊನ್ನೆಯ ತನಕ ಬಾಳಿನ ಭಾಗವಾಗಿದ್ದವರು ಒಮ್ಮಿಂದೊಮ್ಮೆಲೇ ಅಪರಿಚಿತ ಆಗಿಬಿಡುತ್ತಾರೆ. ಅವರನ್ನು ಉಳಿಸಿಕೊಳ್ಳಲು ಆಗದ ಅಸಹಾಯಕತೆ, ಅದರ ಬೆನ್ನಹಿಂದೆ ಅಸಹನೀಯ ಒಂಟಿತನ ಆವರಿಸುತ್ತದೆ. ಶರೀರವು ಮುಖ್ಯ ಅಂಗವೊಂದನ್ನು ಕಳೆದುಕೊಂಡಂತೆ ಶಕ್ತಿಹೀನವಾಗುತ್ತದೆ. ಮನೆ ನುಂಗಲು ಬರುತ್ತದೆ. ಭಯ, ಅಸುರಕ್ಷಿತತೆ, ಅನಿಶ್ಚಿತತೆಗಳು ತಾಂಡವವಾಡುತ್ತವೆ. ಹಗಲೆಲ್ಲ ವ್ಯಗ್ರತೆ, ರಾತ್ರಿ ನಿದ್ರಾನಾಶ, ಹಾಗೂ ಸದಾ ಆತಂಕ, ಖಿನ್ನತೆಯ ಅನುಭವ ಆಗುತ್ತದೆ. ದುಃಖ, ವ್ಯಥೆ, ಕೋಪಗಳು ದಿನಚರಿಯ ಭಾಗವಾಗುತ್ತವೆ. ನಾನೇ ಸರಿಯಿಲ್ಲ ಎನ್ನುವ ತಪ್ಪಿತಸ್ಥ ಭಾವವೂ ಕಾಡುವುದಿದೆ. ಪರಸಂಬಂಧದ ನೋವಿಗೆ ಗುರಿಯಾದವರು ಇತರರಿಗಿಂತ ಹೆಚ್ಚಾಗಿ ಕಾಯಿಲೆಗಳಿಗೆ ಬಲಿಯಾಗುತ್ತಾರೆ ಎಂದು ಸಮೀಕ್ಷೆಗಳು ತಿಳಿಸುತ್ತವೆ.

ಇತ್ತ, ಎಡವಿದ ಸಂಗಾತಿಯೇನೂ ಆರಾಮವಾಗಿರುವುದಿಲ್ಲ. ಅವರೂ ಮಾನಸಿಕ ವೈಪರೀತ್ಯಕ್ಕೆ ತುತ್ತಾಗುತ್ತಾರೆ. ಒಂದು ಕಡೆ ಮೂರನೆಯವರ ಆಕರ್ಷಣೆ, ಇನ್ನೊಂದು ಕಡೆ ಬದ್ಧಸಂಗಾತಿಯನ್ನು ಕಳೆದುಕೊಳ್ಳುವ ಭಯ – ಇವೆರಡರ ನಡುವೆ ಅವರ ಕ್ಷಣಗಳು ಜೋಕಾಲಿ ಆಡುತ್ತವೆ. ಒಳಗೊಳಗೇ ದಹಿಸುವ ತಪ್ಪಿತಸ್ಥ ಭಾವವನ್ನು ಸರಿದೂಗಿಸಲು ನೊಂದ ಸಂಗಾತಿಯಲ್ಲಿ ದೋಷ ಹುಡುಕುತ್ತ, 'ಅದಕ್ಕೇ ಅನಿವಾರ್ಯವಾಗಿ ಹೀಗೆ ಮಾಡುತ್ತಿದ್ದೇನೆ!' ಎಂದು ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ. ಒಂದುಕಡೆ ಶಾಶ್ವತತೆಯ ಭ್ರಮೆಕೊಡುವ ರೋಚಕತೆ, ಇನ್ನೊಂದು ಕಡೆ ವಾಸ್ತವಿಕ ಶಾಶ್ವತತೆ – ಇವು ಅತಂತ್ರತೆಗೆ ತಳ್ಳುತ್ತವೆ. ಹೀಗೆ ಪರಸಂಬಂಧವು ಇಬ್ಬರ ಮೇಲೂ ಕೆಟ್ಟ ಪ್ರಭಾವ ಬೀರುತ್ತ ದಾಂಪತ್ಯದ ಬುಡ ಹಿಡಿದು ಅಲ್ಲಾಡಿಸಿ ಭದ್ರತೆಗೇ ಕೊಡಲಿ ಹಾಕುತ್ತದೆ. ಅಷ್ಟೇ ಅಲ್ಲ, ಇದಕ್ಕೆ ಕಾರಣರಾದ ಮೂರನೆಯವರೂ ಇಂಥದ್ದೇ ತೊಂದರೆಗಳಿಗೆ ಒಳಗಾಗುತ್ತಾರೆ. ತಾವು ಮೋಹಿಸಿರುವವರು ತನ್ನವರಲ್ಲ, ಹಾಗಾಗಿ ಯಾವಾಗಲಾದರೂ ಕೈಬಿಟ್ಟುಹೋಗಬಹುದು ಎಂಬ ಅನಿಶ್ಚಿತತೆಯ ಕತ್ತಿಯು ಸದಾ ತಲೆಯ ಮೇಲೆ ತೂಗುತ್ತಲೇ ಇರುತ್ತದೆ.

ಪರಸಂಬಂಧವು ಮಕ್ಕಳ ಮೇಲೂ ಭೀಕರ ಪರಿಣಾಮ ಬೀರುತ್ತದೆ. ಕಣ್ಣೆದುರು ನಡೆಯುತ್ತಿರುವ ವಿದ್ಯಮಾನವನ್ನು ಅರ್ಥಮಾಡಿಕೊಳ್ಳದೆ ಮಕ್ಕಳು ಭಯಪಡುತ್ತಾರೆ. ಮೊನ್ನೆಯ ತನಕ ಭದ್ರನೆಲೆಯಾಗಿದ್ದ ಕುಟುಂಬವು ಒಡೆದು ಎರಡು ಹೋಳುಗಳಾಗುವುದು ಅಸಹನೀಯ ನೋವು ಉಂಟುಮಾಡುತ್ತದೆ. ಅಪ್ಪ, ಅಮ್ಮ ಇಬ್ಬರಲ್ಲಿ ಒಬ್ಬರನ್ನು ಮಾತ್ರ ಆರಿಸಿಕೊಳ್ಳುವ ಅನಿವಾರ್ಯತೆಯಿಂದ ಕಂಗಾಲಾಗುತ್ತಾರೆ. ಆತಂಕ, ಅನಿಶ್ಚಿತತೆ, ಅಭದ್ರತೆಗಳು ಮಕ್ಕಳನ್ನು ದುಃಖಕ್ಕೆ ಈಡುಮಾಡುತ್ತವೆ. ಇವು ಮುಂದೆ ಅವರ ಆರೋಗ್ಯಕರ ಬೆಳವಣಿಗೆಗೆ ಅಡ್ಡಿಯಾಗುತ್ತ ಭವಿಷ್ಯಕ್ಕೂ ಮಾರಕವಾಗಬಹುದು. ಪರಸಂಬಂಧ ಹೊಂದಿದ ಕುಟುಂಬದ ಮಕ್ಕಳು ಹಾಸಿಗೆಯಲ್ಲಿ ಮೂತ್ರಮಾಡುವ, ಒಂಟಿತನ ಹಾಗೂ ಕೀಳರಿಮೆ ಅನುಭವಿಸುವ, ಕಲಿಕೆಯಲ್ಲಿ ಹಿಂದುಳಿಯುವ, ದುಶ್ಚಟಗಳಿಗೆ ಬಲಿಯಾಗುವ, ಹಾಗೂ ಅಕಾಲದಲ್ಲಿ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವ ಸಂಭವ ಅತಿಹೆಚ್ಚು ಎಂದು ಸರ್ವೇಕ್ಷಣದಿಂದ ಗೊತ್ತಾಗಿದೆ.

ಪರಸಂಬಂಧದ ಕಡುಬಿಸಿಯು ಸಂಗಾತಿಗಳ ಒಡಹುಟ್ಟಿದವರು, ಹಿರಿಯರು, ಆತ್ಮೀಯರು, ನೆರೆಹೊರೆಯವರು ಇವರನ್ನೂ ಸುಡಬಹುದು. ನಂಬಿಕಸ್ಥ ವ್ಯಕ್ತಿಗಳು ನಿಲುವು ಬದಲಿಸಿ ಹಠಾತ್ತಾಗಿ ದೂರವಾದಾಗ ಇನ್ನಷ್ಟು ಒಂಟಿತನ ಕಾಡಬಹುದು. ಸಲ್ಲದವರಿಂದ ಸಲ್ಲದ ಸಲಹೆಗಳು ಸಲೀಸಾಗಿ ಸುರಿಯುವಾಗ ಸಮಜಾಯಿಷಿ ಕೊಡುವುದೇ ಹಿಂಸೆಯಾಗಬಹುದು. ಇದು ಸದ್ಯದ ಆಗುಹೋಗುಗಳ ಮೇಲಲ್ಲದೆ ಭವಿಷ್ಯದ ಮೇಲೂ ಪ್ರಭಾವ ಬೀರಬಹುದು.

ಪರಸಂಗದಲ್ಲಿ ಅವರ ಸಂಗಾತಿ ಎಂಥ ಪ್ರತಿವರ್ತನೆ ತೋರಿಸುತ್ತಾರೆ? ಸಾಮಾಜಿಕವಾಗಿ ಏನೇನು ಕ್ರಮ ಕೈಗೊಳ್ಳುತ್ತಾರೆ?

ಹೆಚ್ಚಿನವರು ಎಡವುತ್ತಿರುವ ಸಂಗಾತಿಯನ್ನು ಹಿಡಿದು ಪ್ರಶ್ನಿಸುತ್ತಾರೆ. ಅವರ ಹೇಳಿಕೆಗಳನ್ನು ಸಂದೇಹದಿಂದ ಪರಿಶೀಲಿಸುತ್ತ, ಹೊಂದಿಕೊಳ್ಳದ್ದನ್ನು ಹೆಕ್ಕಿ ತೋರಿಸುತ್ತ, ನಿಜಾಂಶಕ್ಕಾಗಿ ಪಟ್ಟುಹಿಡಿಯುತ್ತಾರೆ. ಕೈಕೈ ಮಿಲಾಯಿಸುವ ತನಕ ಹೋಗುತ್ತಾರೆ. ಅವರ ಫೋನ್ ಕರೆಗಳನ್ನು ಕದ್ದಾಲಿಸುತ್ತಾರೆ. ವಾಟ್ಸಪ್, ಇಮೇಲ್ ಖಾತೆಯ ಬೀಗವೊಡೆದು ಝಡತಿ ನಡೆಸುತ್ತಾರೆ. ಅವರ ಗೆಳೆಯ-ಗೆಳತಿಯರಿಂದ ಚಲನವಲನದ ಮಾಹಿತಿ ಸಂಗ್ರಹಿಸುತ್ತಾರೆ. ಮನೆಮುರುಕ ಮೂರನೆಯವರನ್ನು ದೂರವಿರಲು ಎಚ್ಚರಿಸುತ್ತಾರೆ. ಸಂಬಂಧಿಕರನ್ನು ಕರೆಸಿ ನ್ಯಾಯ ಪಂಚಾಯತಿ ಮಾಡುತ್ತಾರೆ. ಇನ್ನು ಕೆಲವರು ಗಟ್ಟಿ ಪುರಾವೆಗಾಗಿ ಖಾಸಗಿ ಪತ್ತೇದಾರರಿಂದ ತನಿಖೆ ಮಾಡಿಸುತ್ತಾರೆ. ಸಂಪ್ರದಾಯಸ್ಥ ಹಳ್ಳಿಯ ಕುಟುಂಬವಾದರೆ ಗಂಡನು ಹೆಂಡತಿಯನ್ನು ತವರಿಗೆ ಅಟ್ಟುವುದು, ಹೆಣ್ಣು ಅಸಹಾಯಕಳಾಗಿ ಹಣೆಬರಹವನ್ನು ದೂಷಿಸುವುದು ಈಗಲೂ ವಿರಳವೇನಲ್ಲ.

ಇತ್ತೀಚೆಗೆ ಕಾನೂನಿನಿಂದ ಹೆಣ್ಣಿಗೆ ಹೆಚ್ಚಿನ ಸೌಲಭ್ಯಗಳು ದೊರಕುತ್ತಿವೆಯಷ್ಟೆ? ಪರಿಣಾಮವಾಗಿ, 'ನಿನ್ನ ಗಂಡ ಹೀಗೆ ಮಾಡಿದನೆ? ಬಿಡಬೇಡ, ಅವನ ಮೇಲೆ ಕೇಸ್ ಹಾಕು!' ಎಂದು ನೊಂದ ಮಹಿಳೆಯ ಮೇಲೆ ಒತ್ತಾಯ ಹೇರಲಾಗುತ್ತಿದೆ. ತನ್ನದಲ್ಲದ ನಿರ್ಧಾರದಿಂದ ಕೋರ್ಟ್ ಕಟ್ಟೆಯೇರಿ, ನಂತರ 'ಸ್ವಲ್ಪ ಸಹನೆಯಿಂದ ಇದ್ದರೆ ಸರಿಹೋಗುತ್ತಿದ್ದೇನೋ?' ಎಂದು ಪಶ್ಚಾತ್ತಾಪ ಪಟ್ಟವರೂ ಇದ್ದಾರೆ.

ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಇವೆಲ್ಲ ಕ್ರಮಗಳು ಎಡವುವ ಸಂಗಾತಿಯನ್ನು ಪರಸಂಬಂಧದದಿಂದ ವಿಮುಖಗೊಳಿಸಬಹುದೇನೋ ನಿಜ. ಆದರೆ ಪರಸಂಬಂಧದ ಸುಪ್ತ ಬಯಕೆಯನ್ನು ಮರೆಸಲು ಸಾಧ್ಯವೆ? ಇದರಿಂದ ನೊಂದ ಮನಸ್ಸಿನ ಗಾಯ ಮಾಯುತ್ತದೆಯೆ? ದಾಂಪತ್ಯವು ಮುಂಚಿನ ಸ್ಥಿತಿಗೆ ಮರಳಬಲ್ಲುದೆ? ಒಂದುಕಡೆ ದಾಂಪತ್ಯವನ್ನು ಮುರಿದುಕೊಳ್ಳಲೂ ಸಾಧ್ಯವಿಲ್ಲ, ಇನ್ನೊಂದು ಕಡೆ ಮೊದಲಿನ ಅನುಬಂಧವನ್ನು ತರಲೂ ಸಾಧ್ಯವಿಲ್ಲ ಎನ್ನುವಂಥ ಅತಂತ್ರತೆ ಆಗುವುದಲ್ಲದೆ ಸಂಗಾತಿಯನ್ನು ಕಾವಲು ಕಾಯುವ ಹೊಸ ಕೆಲಸ ತಲೆ ಕೆಡಿಸುತ್ತದೆ. ಕಾವಲು ಕಾಯ್ದಷ್ಟೂ ಎಡವಿದ ಸಂಗಾತಿಗೆ ಅಪನಂಬಿಕೆಯ ಬಿಸಿತಟ್ಟಿ ಮನಸ್ಸು ಮುದುಡುತ್ತದೆ. ಸುಧಾರಣೆ ಸಾಧ್ಯವೇ ಇಲ್ಲ ಎನ್ನಿಸುತ್ತದೆ. ಫಲಿತಾಂಶ? ಹೆಚ್ಚಿನವರು ಅಪರಿಚಿತರಾಗಿ ಬದುಕುತ್ತಾರಷ್ಟೆ.

ಇದರರ್ಥ ಏನು? ಪರಸಂಬಂಧದಿಂದ ಆದ ದುಷ್ಪರಿಣಾಮಗಳಿಂದ ದಾಂಪತ್ಯಕ್ಕೆ ಮುಕ್ತಿಯೇ ಇಲ್ಲವೆ?